ಕರ್ನಾಟಕ ಸರ್ಕಾರ

ಸಂಖ್ಯೆ:ಪಿಯು/187/ಸಿಬ್ಬಂದಿ/ಸಿಆರ್-3/ಉನೇ/2015-16(ಭಾಗ-6)

ನಿರ್ದೇಶಕರ ಕಚೇರಿ,
ಪದವಿ ಪೂರ್ವ ಶಿಕ್ಷಣ ಇಲಾಖೆ,
18ನೇ ಅಡ್ಡರಸ್ತೆ, ಮಲ್ಲೇಶ್ವರಂ,
ಬೆಂಗಳೂರು-560012.
ದಿನಾಂಕ: 23/03/2021.

## ಜ್ಞಾಪನ

**ವಿಷಯ**:- ಶ್ರೀಮತಿ ಬೈಲೂರೆ ಶ್ರೀದೇವಿ ರಾಮಚಂದ್ರ, ಇವರನ್ನು ಮರಾಠಿ ಉಪನ್ಯಾಸಕರಾಗಿ ನೇಮಕಾತಿ ಮಾಡಿ ಸ.ಪ.ಪೂ.ಕಾಲೇಜು, ಭಾಲ್ಕಿ, ಬೀದರ್ ಜಿಲ್ಲೆ, ಇಲ್ಲಿ ಸ್ಥಳನಿಯುಕ್ತಿಗೊಳಿಸಿ ಹೊರಡಿಸಿರುವ ಈ ಕಚೇರಿಯ ಆದೇಶವನ್ನು ತಡೆಹಿಡಿಯುವ ಬಗ್ಗೆ.

ಉಲ್ಲೇಖ:-1. ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಬೆಂಗಳೂರು, ಇವರ ಅಧಿಸೂಚನೆ ಸಂಖ್ಯೆ: ಇಡಿ/ಕೆಇಎ/ಆಡಳಿತ/ಸಿ.ಆರ್-54/2014-15, ದಿನಾಂಕ:08-05-2015, 13-06-2016 ಹಾಗೂ 03-06-2017.
2. ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಬೆಂಗಳೂರು, ಇವರ ಪತ್ರ ಸಂಖ್ಯೆ: ಇಡಿ/ಕೆಇಎ/ಆಡಳಿತ/ಸಿ.ಆರ್-54/2014-15, ದಿನಾಂಕ:12-12-2019.
3. ಈ ಕಚೇರಿ ಜ್ಞಾಪನ ಪತ್ರ ಸಮ ಸಂಖ್ಯೆ ದಿನಾಂಕ:20-03-2021.

-*-

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ-1ರನ್ವಯ ರಾಜ್ಯದಲ್ಲಿನ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿ ಅಧಿಸೂಚನೆ ಹೊರಡಿಸಲಾಗಿತ್ತು. ಅದರನ್ವಯ ಮಾನ್ಯ ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿಯಲ್ಲಿ ಅರ್ಜಿ ಸಲ್ಲಿಸಿರುವ ಶ್ರೀ ಅವಿನಾಶ್ ಮತ್ತು 4ನೇ ಪ್ರತಿವಾದಿಯಾದ ಶ್ರೀಮತಿ ಬೈಲೂರೆ ಶ್ರೀದೇವಿ ರಾಮಚಂದ್ರ, ಇವರು ಅರ್ಜಿ ಸಲ್ಲಿಸಿರುತ್ತಾರೆ.

ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಬೆಂಗಳೂರು, 4ನೇ ಪ್ರತಿವಾದಿಯಾದ ಶ್ರೀಮತಿ ಬೈಲೂರೆ ಶ್ರೀದೇವಿ ರಾಮಚಂದ್ರ ಇವರನ್ನು ಸರ್ಕಾರಿ ಪದವಿ ಪೂರ್ವ ಕಾಲೇಜಿನ ಮರಾಠಿ ವಿಷಯದ ಉಪನ್ಯಾಸಕರ ಹುದ್ದೆಗೆ ಆಯ್ಕೆ ಮಾಡಿ ಉಲ್ಲೇಖ-2ರನ್ವಯ ಆಯ್ಕೆಪಟ್ಟಿಯನ್ನು ಈ ಕಚೇರಿಗೆ ಸಲ್ಲಿಸಿರುತ್ತದೆ.

ಈ ಮಧ್ಯೆ, ಶ್ರೀ ಅವಿನಾಶ್‌ರವರು ಮಾನ್ಯ ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿಯಲ್ಲಿ ಅರ್ಜಿ ಸಂಖ್ಯೆ:244/2021ಅನ್ನು ದಾಖಲಿಸಿ, ಸದರಿ ಅರ್ಜಿಯ 4ನೇ ಪ್ರತಿವಾದಿಯಾದ ಶ್ರೀಮತಿ ಬೈಲೂರೆ ಶ್ರೀದೇವಿ ರಾಮಚಂದ್ರ ಇವರನ್ನು ಆಯ್ಕೆ ಮಾಡಿರುವ ಕ್ರಮವನ್ನು ಪ್ರಶ್ನಿಸಿರುತ್ತಾರೆ ಹಾಗೂ ಸದರಿಯವರಿಗೆ ನೇಮಕಾತಿ ಆದೇಶ ನೀಡದಂತೆ ಮಧ್ಯಂತರಹ ತಡೆಯಾಜ್ಞೆ ನೀಡಲು ಕೋರಿರುತ್ತಾರೆ.

ಮಾನ್ಯ ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿಯು ಮೇಲ್ಕಂಡ ಅರ್ಜಿಗೆ ಸಂಬಂಧಿಸಿದಂತೆ ದಿನಾಂಕ:03-03-2021ರಂದು ಈ ಕೆಳಗಿನಂತೆ ಮಧ್ಯಂತರ ಆದೇಶ ನೀಡಿರುತ್ತದೆ:

## INTERIM ORDER

This application stands posted to 31-03-2021.

Till such time, the Interim Order of Stay granted on 21-01-2021 is extended.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಶ್ರೀಮತಿ ಬೈಲೂರೆ ಶ್ರೀದೇವಿ ರಾಮಚಂದ್ರ , ಇವರನ್ನು ಮರಾಠಿ ಭಾಷಾ ಉಪನ್ಯಾಸಕರಾಗಿ ನೇಮಕಾತಿ ಮಾಡಿ ಸರ್ಕಾರಿ ಪದವಿ ಪೂರ್ವ ಕಾಲೇಜು, ಭಾಲ್ಕಿ, ಬೀದರ್, ಇಲ್ಲಿ ಸ್ಥಳನಿಯುಕ್ತಿಗೊಳಿಸಿ ಹೊರಡಿಸಿರುವ ಈ ಕಚೇರಿಯ ಉಲ್ಲೇಖ-3ರ ಅಧಿಸೂಚನೆಯನ್ನು ಮೇಲ್ಕಂಡ ಅರ್ಜಿಯಲ್ಲಿ ಮಾನ್ಯ ನ್ಯಾಯಾಲಯವು ತೀರ್ಮ ನೀಡಿ, ಸದರಿ ತೀರ್ಪನ್ನು ಆಧರಿಸಿ ಈ ಕಚೇರಿಯಿಂದ ಪುನಃ ಆದೇಶ ಹೊರಡಿಸುವವರೆವಿಗೂ ಈ ಮೂಲಕ ತಡೆಹಿಡಿಯಲಾಗಿದೆ. ಉಲ್ಲೇಖ-3ರ ಅಧಿಸೂಚನೆಯನ್ವಯ ಶ್ರೀಮತಿ ಬೈಲೂರೆ ಶ್ರೀದೇವಿ ರಾಮಚಂದ್ರ, ಇವರನ್ನು ಕರ್ತವ್ಯದ ಮೇಲೆ ಹಾಜರು ಪಡಿಸಿಕೊಳ್ಳಬಾರದೆಂದು ಪ್ರಾಚಾರ್ಯರು, ಸರ್ಕಾರಿ ಪದವಿ ಪೂರ್ವ ಕಾಲೇಜು, ಭಾಲ್ಕಿ, ಬೀದರ್, ಇವರಿಗೆ ನಿರ್ದೇಶಿಸಲಾಗಿದೆ.

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ.

**ಪ್ರತಿ:**

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಶಿಕ್ಷಣ ಇಲಾಖೆ, 6ನೇ ಮಹಡಿ, ಬಹುಮಹಡಿ ಕಟ್ಟಡ, ಬೆಂಗಳೂರು – 560 001.
3. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 012.
4. **ಸರ್ಕಾರಿ ವಕೀಲರು, ಕರ್ನಾಟಕ ಆಡಳಿತ ನ್ಯಾಯ ಮಂಡಳಿ, ಬೆಂಗಳೂರು.**
5. ಸಂಬಂಧಪಟ್ಟ ಜಿಲ್ಲಾ ಉಪನಿರ್ದೇಶಕರಿಗೆ.
6. ಸಂಬಂಧಪಟ್ಟ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯರಿಗೆ.
7. ಸಂಬಂಧಪಟ್ಟ ಅಭ್ಯರ್ಥಿಗಳಿಗೆ – ಅಗತ್ಯ ಕ್ರಮಕ್ಕಾಗಿ.
8. ಶಾಖಾ ರಕ್ಷ ಕಡತ / ಹೆಚ್ಚುವರಿ ಪ್ರತಿಗಳು.